ಅವನು ಕಾದರೂ ಅವನ ಜೀವ ತಡೆದು ನಿಲ್ಲಬೇಕಲ್ಲ? ಹಾಗಾಗಿ ಅವುಗಳಿಗೆ ಕಾಯುತ್ತಾ ಕೂರುವಂತಿಲ್ಲ. ಅಕ್ಕಪಕ್ಕದಲ್ಲಿ ಹಾಯುವ ಆಟೋಗಳಿಗೆ ಕೈತೋರಿದರೆ ಸಾಕು. ಟ್ರಾಫಿಕ್ಕಿನವರು ಕಾಣುತ್ತಿದ್ದಂತೆ ಅವರೇ ಹತ್ತಿರ ಬಂದು ಗಾಯಾಳುವನ್ನು ನಾಜೂಕಾಗಿ ಎತ್ತಿ ಕೂರಿಸಿಕೊಂಡು ಹತ್ತಿರದ ಆಸ್ಪತ್ರೆಗೆ ಮುಟ್ಟಿಸಿಬಿಡುತ್ತಾರೆ. ಅಂತಹ ಸಮಯಗಳಲ್ಲಿ ಬಾಡಿಗೆ ದುಡ್ಡನ್ನೂ ಕೇಳುವುದಿಲ್ಲ. ನೋವಿನಿಂದ ನರಳುತ್ತಿರುವವನನ್ನು ಹಣ ಕೇಳಲಾದೀತೆ? ಮತ್ತೆಂದಾದರೂ ಕರ್ತವ್ಯದಲ್ಲಿರುವಾಗ ಅದೇ ಸಿಬ್ಬಂದಿ ಸಿಕ್ಕರೆ 'ಆವತ್ತು ಆಸ್ಪತ್ರೆಗೆ ಹಾಕಿದ್ನಲ್ಲಾ... ಹೆಂಗವ್ನೆ ಸಾರ್ ಅವ್ನು...' ಅಂತ ಕ್ಷೇಮ ವಿಚಾರಿಸಿಕೊಳ್ಳುತ್ತಿರುತ್ತಾರೆ. ಕೆಲವೊಮ್ಮೆ 'ಹೋಗ್ಬಿಟ್ಟ ಕಣಯ್ಯಾ...' ಅಂದರೆ 'ಅಯ್ಯಯ್ಯೋ ಹೌದಾ.. ಛೇ, ಎಂಥಾ ಕೆಲಸವಾಯ್ತು ನೋಡಿ... ಚೆನ್ನಾಗೇ ಮಾತಾಡ್ತಿದ್ನಲ್ಲಾ ಸಾರ್ ಅವತ್ತೂ?...' ಅಂತ ಹಲುಬುವುದೂ ಇದೆ. ಒಟ್ಟಿನಲ್ಲಿ ನಾಗರಿಕರ ಕಷ್ಟಸುಖಗಳಿಗೆ ಸ್ಪಂದಿಸಬೇಕೆನ್ನುವ ಗುಣ ಬಹುತೇಕ ಆಟೋ ಚಾಲಕರಲ್ಲಿರುವುದು ನಿಜ. ಆದರೂ ಉಳಿದ ವಾಹನಗಳಿಗಿಂತ ತಮ್ಮ ಮೇಲೇಯೇ ಅತಿ ಹೆಚ್ಚು ಕೇಸುಗಳನ್ನು ದಾಖಲಿಸಲಾಗುತ್ತದೆಂಬ ಮುನಿಸು ಅವರಿಗಿದೆ. ಏನು ಮಾಡೋದು... ನಡೆಯುವವನು ಎಡವುವನಲ್ಲದೆ ಕುಳಿತವನು ಎಡವಿಯಾನೆ?

ಪೊಲೀಸು ಇಲಾಖೆಯನ್ನೇ ತೆಗೆದುಕೊಳ್ಳಿ, ಬೇರೆ ಡಿಪಾರ್ಟುಮೆಂಟುಗಳಿಗಿಂತ ಹೆಚ್ಚು ಕಾಮೆಂಟುಗಳಿಗೆ, ದೂರು ದುಮ್ಮಾನಗಳಿಗೆ, ಸಿಟ್ಟು ಸೆಡವುಗಳಿಗೆ ಕೊನೆಗೆ ಪ್ರಶಂಸೆಗಳಿಗೂ... ಮೇಲಿಂದ ಮೇಲೆ ಈಡಾಗುವ ಇಲಾಖೆ ಇದು. ಸಾರ್ವಜನಿಕರ ಬಾಯಲ್ಲಿ ಅತಿಹೆಚ್ಚು ಚರ್ಚಿತವಾಗುವ ಇಲಾಖೆಯೆಂದರೆ ಇದೇ. ಪೊಲೀಸು ಪಾತ್ರಗಳಿಲ್ಲದ ಯಾವುದೇ ಭಾಷೆಯ ಸಾಮಾಜಿಕ ಸಿನಿಮಾವೊಂದನ್ನು ಕಲ್ಪಿಸಿಕೊಂಡು ನೋಡಿ, ಊಹೂಂ.. ಸಾಧ್ಯವಾಗುವುದಿಲ್ಲ. ಏನೇ ಪ್ರಶಸ್ತಿ ವಿಜೇತ ಚಿತ್ರ ಅಂದರೂ ಅದರಲ್ಲೂ ಒಂದು ಖಾಕಿ ಪಾತ್ರ 'ಹಾಗ್' ಬಂದು 'ಹೀಗ್' ಹೋಗುತ್ತದೆ... ಬೇರೆ ಯಾವುದೇ ಇಲಾಖೆ ಇಷ್ಟರಮಟ್ಟಿಗೆ ಜನಮಾನಸದಲ್ಲಿ ಪರಿಣಾಮ ಉಂಟುಮಾಡಿದ ಉದಾಹರಣೆಗಳಿಲ್ಲ.

ಆಟೋಗಳ ದೆಸೆಯಿಂದಾಗಿ ನಮ್ಮ ಟ್ರಾಫಿಕ್ ಎಸ್ಸೈ ಪಾಷಾ ಅವರಿಗೆ ವಿಚಿತ್ರ ಜವಾಬ್ದಾರಿಯೊಂದು ಗಂಟು ಬಿದ್ದ ಪ್ರಸಂಗವನ್ನು ನಾನಿಲ್ಲಿ ಹೇಳಬೇಕು. ತಮ್ಮ ಪಾಡಿಗೆ ತಾವು ನಗರದ ಮುಖ್ಯ ರಸ್ತೆಯೊಂದರಲ್ಲಿ ಸಂಚಾರ ನಿರ್ವಹಣೆ ಮಾಡಿಕೊಂಡಿದ್ದ ಪಾಷಾ ಸಾರ್ವಜನಿಕರ ಕಷ್ಟಸುಖಗಳಿಗೆ ಯಾವಾಗಲೂ ಮಿಡಿಯುವಂತಹವರು. ಯಾವಾಗಲೋ ಒಮ್ಮೆ ಬ್ಯಾಂಕೊಂದರ ಮುಂದೆ ನಿಂತಿದ್ದಾಗ ಅಂಗವಿಕಲ ಮಹಿಳಾ ಉದ್ಯೋಗಿಯೊಬ್ಬರು ನಡೆದಾಡಲು ಕಷ್ಟಪಡುತ್ತ ಊರುಗೋಲನ್ನು ಹಿಡಿದು ಹೊರಬರುತ್ತಿರುವುದನ್ನು ಕಂಡು ಕನಿಕರದಿಂದ ಆಟೋ ಹತ್ತಿಸಿ ಕಳಿಸಿದ್ದಾರೆ. ತಾನು ಇದೇ ಬ್ಯಾಂಕಿನ ಉದ್ಯೋಗಿ ಎಂದು ಪರಿಚಯ ಮಾಡಿಕೊಂಡ ಆ ಮಹಿಳೆ 'ದಯವಿಟ್ಟು ತಮ್ಮ ಮೊಬೈಲ್ ನಂಬರು ಕೊಡುತ್ತೀರಾ...' ಎಂದು ಕೇಳಿದ್ದಾರೆ. 'ಅಯ್ಯೋ ಅದಕ್ಕೇನ್, ತಗೊಳ್ಳಿ ಮೇಡಂ...' ಅಂದವರೇ ಎಸ್ಸೈ ಸಾಹೇಬರು ಟಕಟಕನೆ ನಂಬರು ಹೇಳಿದ್ದೂ ಅದನ್ನವರು ಬರೆದುಕೊಂಡದ್ದೂ ಆಗಿದೆ. ಅದಾದ ಮಾರನೆಯ ದಿನದಿಂದಲೇ ಶುರುವಾದದ್ದು... ಜೂಟಾಟ, ಅಲ್ಲಲ್ಲ ಪರದಾಟ.. ಊಹೂಂ ಅದು ಶುದ್ಧ ಕಾಟ!

ಪ್ರತಿದಿನ ಆಕೆ ಕೆಲಸ ಮುಗಿಸಿ ಹೊರಡುವಾಗ ಪಾಷಾ ಬ್ಯಾಂಕಿನೆದುರು ನಿಂತಿರಬೇಕು. ಇಲ್ಲದಿದ್ದರೆ ಅವರೆಲ್ಲೇ ಇದ್ದರೂ ಮೊಬೈಲಿಗೆ ಕರೆ ಬರುತ್ತಿತ್ತು. 'ಸಾರ್... ಆಟೋದವರು ಕರೆದ ಕಡೆ ಬಾರದೆ ತುಂಬ ಕಿರಿಕಿರಿ ಮಾಡುತ್ತಿದ್ದಾರೆ... ಕೊಂಚ ಬಂದು ಹೋಗ್ತೀರಾ?...' ಅಂತ